4. ಆರ್ಬಿಟ್ರೇಟರುಗಳು ಡಿಕ್ರಿ ನೀಡಿದ ನಂತರ ಸಹಕಾರ ಸಂಘಗಳ ಸಹಾಯಕರ ನಿಬಂಧಕರ ನ್ಯಾಯಾಲಯದ ಮೂಲಕ ಸಾಲ ವಸೂಲಾತಿಗೆ ಅವಕಾಶವಿರುತ್ತದೆ. ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥಪಡಿಸುವುದಕ್ಕೆ ತೆಗೆದುಕೊಳ್ಳುವ ಕಾಲಾವಕಾಶವನ್ನು ಸಹಕಾರಿ ನ್ಯಾಯಾಲಯದಲ್ಲಿ ತೆಗೆದುಕೊಳ್ಳುವ ಕಾಲಾವಕಾಶಕ್ಕೆ ಹೋಲಿಕೆ ಮಾಡಿದಲ್ಲಿ ಸಹಕಾರಿ ನ್ಯಾಯಾಲಯದಲ್ಲಿ ತ್ವರಿತವಾಗಿ ಇತ್ಯರ್ಥವಾಗುತ್ತಿದೆ.

5. ಇಲ್ಲ.

5592(6325) : ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಕಂಟ್ರಾಕ್ಟರ್ಸ್ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ ಇರುವ ಸುಮಾರು 60 ನೌಕರರು 10 ವರ್ಷಗಳಿಗೂ ಹೆಚ್ಚು ಸೇವೆ ಸಲ್ಲಿಸಿದ್ದು ಇವರಿಗೆ ಸರ್ಕಾರಿ ಸ್ವಾಮ್ಯದ ಇಲಾಖೆಗಳಾದ ಕೋ–ಆಪರೇಟಿವ್ ಫೆಡರೇಷನ್, ಡಿ.ಸಿ.ಸಿ. ಬ್ಯಾಂಕ್ ಅಪೆಕ್ಸ್ ಬ್ಯಾಂಕ್ ಅಥವಾ ಇನ್ನು ಯಾವುದೇ ಸರ್ಕಾರಿ ಸ್ವಾಮ್ಯದಲ್ಲಿ ಕೆಲಸ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಸದರಿ ನೌಕರರು ಈಗಾಗಲೇ ಸರ್ಕಾರದ ಸೌಲಭ್ಯ ಪಡೆದಿದ್ದು, ನೌಕರರು 10 ವರ್ಷ ಕೆಲಸ ನಿರ್ವಹಿಸಿದ್ದುದರಿಂದ ಸರ್ಕಾರಿ ಪೆನ್‌ಷನ್ (ನಿವೃತ್ತಿ ವೇತನ) ಪಡೆಯಲು ಅರ್ಹರಾಗುವರೇ?

ಇ) ಹಾಗಿದ್ದಲ್ಲಿ, 10 ವರ್ಷ ಕೆಲಸ ಪೂರ್ಣಗೊಳಿಸಿದ ನೌಕರರಿಗೆ ನಿವೃತ್ತಿ ವೇತನ ನೀಡಲು ಸರ್ಕಾರದ ಕ್ರಮವೇನು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು):

ಅ) ಇಲ್ಲ.

ಆ) ಸದರಿ ನೌಕರರು ಸರ್ಕಾರಿ ನೌಕರರಲ್ಲ, ಹಾಗೂ ಸರ್ಕಾರದ ಸೌಲಭ್ಯ ಪಡೆದಿರುವುದಿಲ್ಲ. ಆದುದರಿಂದ ಸರ್ಕಾರಿ ಪೆನ್‌ಷನ್ (ನಿವೃತ್ತಿ ವೇತನ) ಪಡೆಯಲು ಅರ್ಹರಿರುವುದಿಲ್ಲ.

ಇ) ಸದರಿ ನೌಕರರು ಸಹಕಾರ ಬ್ಯಾಂಕಿನ ನೌಕರರಾಗಿದ್ದು, ಸರ್ಕಾರಿ ನೌಕರರಾಗಿರುವುದಿಲ್ಲ. ಆದುದರಿಂದ ನಿವೃತ್ತಿ ವೇತನ ನೀಡುವ ಪ್ರಮೇಯ ಉದ್ಭವಿಸುವುದಿಲ್ಲ.

5593(6326) : ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸ್ತ್ರೀಶಕ್ತಿ ಯೋಜನೆಯಡಿ 2004–05ರಲ್ಲಿ ಬಿಡುಗಡೆಯಾದ ಹಣವೆಷ್ಟು?

ಆ) ತುರುವೇಕೆರೆ ಕ್ಷೇತ್ರಕ್ಕೆ ಮೀಸಲಿಟ್ಟ ಹಣ ಎಷ್ಟು?

ಇ) ಯಾವಾಗ ಹಣ ವಿತರಣೆ ಮಾಡಲಾಗುವುದು?

ಶ್ರೀಮತಿ ಭಾಗೀರಥಿ ಮರುಳಸಿದ್ದನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) ಸ್ತ್ರೀಶಕ್ತಿ ಯೋಜನೆಯಡಿ 2004–05ರಲ್ಲಿ ಬಿಡುಗಡೆಯಾದ ಹಣ ರೂ. 1600.00 ಲಕ್ಷ.

ಆ) ಗ್ರಾಮೀಣ ಸ್ತ್ರೀಶಕ್ತಿ ಯೋಜನೆಯಡಿ ತುರುವೇಕೆರೆ ಕ್ಷೇತ್ರಕ್ಕೆ ರೂ. 4,59,575/–ಗಳನ್ನು ಬಿಡುಗಡೆಗೊಳಿಸಲಾಗಿದೆ.